**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ**

ಸಿ.ಸಿ. ನಂ- 397/2020

Cw-6 Pw-4

| | |
|---|---|
| ಹೆಸರು | ರಾಜೇಸಾಬ ತಂದೆ ಬುರನಸಾಬ ಮಸಳಿ |
| ವಯಸ್ಸು | 52 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಜಮಖಂಡಿ |

ದಿನಾಂಕಃ09-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ಚಾಸಾ-1 ರವರ ಪರಿಚಯ ಇದೆ . ನಮ್ಮ ಮತ್ತು ಚಾಸಾ-1 ರವರ ಮನೆ ಒಂದೇ ಓಣಿಯಲ್ಲಿ ಇರುತ್ತದೆ . ಸುಮಾರು 04 ವರ್ಷಗಳ ಹಿಂದೆ ಸಂಜೆ 04 ಗಂಟೆ ಸುಮಾರಿಗೆ ನಾನು ನನ್ನ ದ್ವಿಚಕ್ರ ವಾಹನದ ಮೇಲೆ ಕೆಲಸ ಮುಗಿಸಿಕೊಂಡು ಲಕ್ಕನ ಕರೆ ಹತ್ತಿರ ಬರುತ್ತಿದ್ದಾಗ ಒಂದು ಕಾರ ವಾಹನ ಮುದೋಳ ಕಡೆಯಿಂದ ಲಕ್ಕನ ಕರೆ ಕಡೆಗೆ ಅತೀ ವೇಗ ಮತ್ತು ನಿರ್ಲಕ್ಷತದಿಂದ ಚಾಲನೆ ಮಾಡಿಕೊಂಡು ಬಂದು ಆ ಕಾಲಕ್ಕೆ ರಸ್ತೆ ಬದಿಗೆ ತನ್ನ ದ್ವಿಚಕ್ರ ವಾಹನ ಮೇಲೆ ನಿಂತ ಉಮರ ಪಾರುಕ ಇತನಿಗೆ ಹಾಯಿಸಿ ಅಪಘಾತ ಪಡಿಸಿರುತ್ತಾನೆ .ಸದರಿ ಅಪಘಾತದಲ್ಲಿ ಉಮರ ಪಾರುಕ ಇತನಿಗೆ ತಲೆ ಹಿಂದೆ ಬಾರಿ ಪೆಟ್ಟಾಗಿತ್ತು ನಂತರ ನಾನು ಅವರ ಮನೆಗೆ ಹೋಗಿ ಅಪಘಾತ ವಿಚಾರವನ್ನು ತಿಳಿಸಿರುತ್ತೇನೆ . ನಂತರ ಸ್ಥಳದಲ್ಲಿ ಕೂಡಿದ ಜನರು ಅಂಬುಲೇನ್ಸಗೆ ಪೋನ ಕರೆ ಮಾಡಿ ಆತನಿಗೆ ಕೆ ಎಲ್ ಇ ಆಸ್ಪತ್ರೆಗೆ ಸೇರಿಸಿರುತ್ತಾರೆ . ನಂತರ ವೈದ್ಯರು ಸಲಹೆ ಮೇರೆಗೆ ಆತತನ್ನು ಜಮಖಂಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆಯಲ್ಲಿ ಆತನು ಮರಣ ಹೊಂದಿರುತ್ತಾನೆ . ನಂತರ ಪೋಲಿಸರು ಮೃತ ಉಮರ ಪಾರುಕ ನ ಶವ ಪಂಚನಾಮೆಯನ್ನು ಜಮಖಂಡಿ ಸರ್ಕಾರಿ ಆಸ್ಪತ್ರೆಯಲ್ಲಿ ಜರುಗಿಸಿ ಪೋಟೋವನ್ನು ಸಹ ತೆಗೆದಿರುತ್ತಾರೆ . ಸದರಿ ಘಟನೆ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ .

***ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಮಾನ್ಯ ಸಸಅ ರವರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.***

**ಪಾಟೀ ಸವಾಲುಃ ಮಾನ್ಯ ಎಪಿಪಿ ವರಿಂದ-** ದಿನಾಂಕ 22-11-2019 ರಂದು ಸಂಜೆ 04-45 ಗಂಟೆಗೆ ಅಪಘಾತವಾಗಿರುತ್ತದೆ ಎಂದರೆ ಸರಿ . ಉಮರ ಪಾರುಕ ಇತನು ಹಿರೋ ಹೊಂಡಾ ಡಿಲಕ್ಷ ಕಂಪನಿಯ ದ್ವಿಚಕ್ರ ವಾಹನ ಸಂಖ್ಯೆ ಕೆ ಎ-48-ಕೆ -5965 ಚಲಾಯಿಸುತ್ತಿದ್ದ ಎಂದರೆ ಸರಿ . ನಂತರ ಕಾರ ವಾಹನದ ಚಾಲಕನ ಹೆಸರು ಕೇಳಲಾಗಿ ಸಂತೋಷ ಕರ್ಲಟ್ಟಿ ಸಾ ಮುದೋಳ ಎಂದು ತಿಳಿಸಿರುತ್ತಾನೆ ಎಂದರೆ ಸರಿ . ನಂತರ ಉಮರ ಪಾರುಕ ಇತನಿಗೆ ಕೆ ಎಲ್ ಇ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಮೃತ ಪಟ್ಟಿರುತ್ತಾನೆ ಮತ್ತು ಆಗ ಸಮಯ ಸಂಜೆ 05

ಗಂಟೆ ಆಗಿತ್ತು ಎಂದರೆ ಸರಿ . ನಂತರ ಈ ಕುರಿತು ದಿನಾಂಕ 23-11-2019 ರಂದು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲುಃ ಶ್ರೀ ಯು ಎಚ್ ಕೆ ಆರೋಪಿ ಪರ ವಕೀಲರಿಂದಃ-**

ನಾನು ಜಂಡೆ ಗಲ್ಲಿಯ ವಾರ್ಡ ಸದಸ್ಯನಾಗಿದ್ದೆ ಎಂದರೆ ಸರಿ . ನಾನು ಎಂ ಎಲ್ ಎ ಚುನಾವಣೆಗೆ ನಿಂತಿದ್ದೆ ಎಂದರೆ ಸರಿ . ನಾನು ಸಮಾಜ ಸೇವೆ ಕೆಲಸ ಮಾಡುತ್ತೇನೆ ಎಂದರೆ ಸರಿ . ನಾನು ಕೋರ್ಟ ಕೇಸ ಸಂಬಂದಪಟ್ಟಂತೆ ಸಲಹೆಗಳನ್ನು ಕೊಡುತ್ತಿರುತ್ತೇನೆ ಎಂದರೆ ಸರಿಯಲ್ಲ . ಹಾಗೆದ್ದಲ್ಲಿ ಜನರು ನನಗೆ ತನ್ನ ಕಷ್ಟದಲ್ಲಿ ಕರೆಯುತ್ತಾರೆ ಎಂದರೆ ಸರಿ .

ಅಪಘಾತ ದಿನದಂದು ನಾನು ಲಕ್ಕನ ಕೆರೆಯಿಂದ ಬರುತ್ತಿದ್ದೆ . ಆರೋಪಿಯನ್ನು ನಾನು ಇದೇ ಮೊದಲನೇ ಸಲ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಅಪಘಾತದಿಂದ ಆರೋಪಿಗೆ ಬೇಟಿ ಮಾಡಿ ಆತನ ಹೆಸರು ವಿಳಾಸ ಕೇಳಿರುವದಿಲ್ಲ . ಪೋಲಿಸರಿಗೆ ನನ್ನ ಹೇಳಿಕೆಯನ್ನು ಹೀಗೆ ಬರೆಯಬೇಕು ಎಂದು ನಾನು ಮಾಹಿತಿ ನೀಡಿರುವದಿಲ್ಲ , ಅವರು ಬರೆದ ಹೇಳಿಕೆಯನ್ನು ನನಗೆ ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ . ನಾನು ಸ್ಥಳ ಪಂಚನಾಮೆ , ವಾಹನ ತಡೆ ಪಂಚನಾಮೆ ಮತ್ತು ಶವ ಪಂಚನಾಮೆ ಕಾಲಕ್ಕೆ ಹಾಜರು ಇದ್ದೆ ಎಂದರೆ ಸರಿ . ಅಪಘಾತ ಸ್ಥಳದಲ್ಲಿ 03 ರಸ್ತೆಗಳು ಬಂದು ಕುಡುತ್ತವೆ . ಅಪಘಾತ ಸ್ಥಳದಿಂದ ಚೌಡಯ್ಯಾ ನಗರ ಕ್ರಾಸ ಇದಗಾ ಮೈದಾನ ½ ಕೀ ಮಿ ಅಂತರದಲ್ಲಿ ಇದೆ ಎಂದರೆ ಸರಿ . ನಾನು ನನ್ನ ಹೇಳಿಕೆಯಲ್ಲಿ ಕಾರು ವಾಹನದ ಚಾಲಕ ಇದಗಾ ಮೈದಾನ ಕಡೆಯಿಂದ ತನ್ನ ವಾಹನವನ್ನು ಚಲಾಯಿಸುಕೊಂಡು ಬಂದ ಬಗ್ಗೆ ಹೇಳಿ ಬರೆಸಿರುವದಿಲ್ಲ . ಮೃತ ವ್ಯಕ್ತಿಯ ವಾರಸುದಾರರಿಗೆ ಪರಿಹಾರ ಹಣ ಬರಲಿ ಎಂದು ಆರೋಪಿ ಯಾವುದೇ ತಪು ಇಲ್ಲದೇ ಇದ್ದರೂ ಸಹ ಆತನ ವಿರುದ್ದ ಖೊಟ್ಟಿ ಪಿರ್ಯಾದಿ ಸಲ್ಲಿಸಿ ಈ ದಿನ ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ

<u>ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ</u>

ಸಿ.ಸಿ. ನಂ- 397/2020

Cw-5 Pw-3

| | |
|---|---|
| ಹೆಸರು | ಸದ್ದಾಮ ತಂದೆ ಕುತುಬುದ್ದಿನ ಪಟಾಣ |
| ವಯಸ್ಸು | 26 ವರ್ಷ |
| ಉದ್ಯೋಗ | ಸೆಂಟರಿಂಗ್ |
| ವಾಸಸ್ಥಳ | ಜಮಖಂಡಿ |

<u>ದಿನಾಂಕಃ09-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ದಿನಾಂಕ 23-11-2019 ರಂದು ಜಮಖಂಡಿ ಲಕ್ಕನ ಕೆರೆ ಹತ್ತಿರ ಒಂದು ಕಾರ ವಾಹನ ಮತ್ತು ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿದ್ದು ಆ ಕಾಲಕ್ಕೆ ನಾನು ಚಾಸಾ-4 ರವರು ಸ್ಥಳ ಪಂಚನಾಮೆವನ್ನು ಮದ್ಯಾಹ್ನ 03-30 ರಿಂದ 04-30 ವರೆಗೆ ಜರುಗಿಸಿ ಒಂದು ಹಾತ್ ನಕಾಶೆಯನ್ನು ಸಹ ತಯಾರಿಸಿರುತ್ತೇನೆ ಹಾಗೂ ಸ್ಥಳದಲ್ಲಿ 02 ಪೋಟೋಗಳನ್ನು ಸಹ ತೆಗೆಸಿರುತ್ತಾರೆ . ನಂತರ ವಾಹನ ತಡೆ ಪಂಚನಾಮೆಯನ್ನು ಜಮಖಂಡಿ ಶಹರ ಪೋಲಿಸ ಠಾಣೆಯ ಅವರಣದಲ್ಲಿ ಮದ್ಯಾಹ್ನ 03-30 ರಿಂದ 04-30 ಗಂಟೆಗೆ ಜರುಗಿಸಿ ಅಲ್ಲಿ ಒಂದು ಕಾರ ಮತ್ತು ಒಂದು ದ್ವಿಚಕ್ರ ವಾಹನವನ್ನು ಜಪ್ತಿ ಪಡಿಸಿಕೊಂಡು ಎರಡು ಪೋಟೋಗಳನ್ನು ಸಹ ತೆಗೆಸಿರುತ್ತಾರೆ . ನಾನು ಪಂಚನಾಮೆಗಳಿಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ . ಅವುಗಳನ್ನು ಈಗಾಗಲೇ ನಿಪಿ-7,8 ಮತ್ತು 11 ಎಂದು ಗುರುತಿಸಲಾಗಿದೆ . ಅದರಲ್ಲಿ ಸಾಕ್ಷಿ ಸಹಿಗಳನ್ನು ನಿಪಿ-7 ಬಿ , 8 ಬಿ ಮತ್ತು 11 ಬಿ ಎಂದು ಗುರುತಿಸಲಾಯಿತು . ಪಂಚನಾಮೆ ಕಾಲಕ್ಕೆ ತೆಗದ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ- 2, 3, 9 ಮತ್ತು 10 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲುಃ ಶ್ರೀ ಯು ಎಚ್ ಕೆ ಆರೋಪಿ ಪರ ವಕೀಲರಿಂದಃ-** ಮೃತ ಪಟ್ಟ ಉಮರ ಪಾರುಕ ರವರ ಮನೆ ಮತ್ತು ನಮ್ಮ ಮನೆ ಅಕ್ಕಪಕ್ಕದಲ್ಲಿ ಇರುತ್ತದೆ . ನನಗೆ ಪಂಚನಾಮೆಕ್ಕೆ ಯಾರು ಕರೆದಿರುವದಿಲ್ಲ ನಾನೇ ಖುದ್ದಾಗಿ ಹೋಗಿರುತ್ತೇನೆ . ಮೊದಲನೇ ದಾಗಿ ಸ್ಥಳ ಪಂಚನಾಮೆ ಮಾಡಿರುತ್ತಾರೆ ಮರು ದಿನ ವಾಹನ ತಡೆ ಪಂಚನಾಮೆಯನ್ನು ಪೋಲಿಸ ಠಾಣೆಯಲ್ಲಿ ಮಾಡಿರುತ್ತಾರೆ . ಎರಡು ಪಂಚನಾಮೆ ಮತ್ತು ಹಾತ್ ನಕಾಶೆಯನ್ನು ಯಾರು ತಯಾರು

ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವದಿಲ್ಲ . ನಾನು ಪಂಚನಾಮೆ ಮೇಲೆ ಸಹಿಗಳನ್ನು ಗುನ್ನೆ ಜಾಗೆ ಮತ್ತು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ . ಆ ಕಾಲಕ್ಕೆ ನನ್ನ ಜೊತೆ ಚಾಸಾ–4 ಮತ್ತು 6 ರವರು ಇದ್ದರು ಅವರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ . ಆ ದಿನ ಪಂಚನಾಮೆಗೆ ಹೋಗಿ ನನ್ನ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಹಾತ್ ನಕಾಶೆಯನ್ನು ತಯಾರಿಸಿರುತ್ತಾರೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಅದೇ ದಿನ ಪೋಲಿಸ ಠಾಣೆ ಆವರಣದಲ್ಲಿ ವಾಹನ ತಡೆ ಪಂಚನಾಮೆಯನ್ನು ಜರುಗಿಸಿ ನಾನು ಅದಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಮೃತ ವ್ಯಕ್ತಿ ನನ್ನ ಸ್ನೇಹಿತನಾದ ಕಾರಣ ಆತನ ವಾರಸುದಾರರಿಗೆ ಅನುಕೂಲವಾಗಲೀ ಎಂದು ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ